ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್.ವೃತ್ತ, ಬೆಂಗಳೂರು-560 001.
ದೂರವಾಣಿ: 91-080-22212408,
ಫ್ಯಾಕ್ಸ್ : 91-080-22277528.


ಸಂಖ್ಯೆ: ತಾಂತ್ರಿಕ/ಆಡಳಿತ/ಸುತ್ತೋಲೆ ಸಂ.2/2009-2010. ದಿನಾಂಕ: 06-05-2009.

## ಸುತ್ತೋಲೆ

**ವಿಷಯ:** ಸರ್ಕಾರಿ ಜಮೀನನ್ನು ಅಳತೆ ಮಾಡಲು ಪರವಾನಗಿ ಭೂಮಾಪಕರ ಸೇವೆಯನ್ನು ಉಪಯೋಗಿಸಿದಾಗ ಅವರಿಗೆ ಸಂಭಾವನೆ ಕೊಡುವ ಬಗ್ಗೆ.

**ಉಲ್ಲೇಖ:** ಈ ಕಚೇರಿಯ ಸುತ್ತೋಲೆ ಸಂ ತಾಂತ್ರಿಕ/ದ.ಪೋ.ಆಂದೋಲನ/40ಎ/2008-09 ದಿನಾಂಕ 13-01-2009.

***

ಭೂಮಾಪನ ಇಲಾಖೆಯು ಎಲ್ಲಾ ಸರ್ಕಾರಿ ಜಮೀನುಗಳ ಅಳತೆ, ಬಾಕಿಯಿರುವ ಭೂಮಂಜೂರಾತಿ ಪ್ರಕರಣಗಳ ವಿಲೇವಾರಿ, ಸರ್ಕಾರಿ ಜಮೀನುಗಳ ಡೇಟಾ ಬೇಸ್ ಅನ್ನು ಸೃಷ್ಟಿಸುವ ಬಗ್ಗೆ ಅತ್ಯಂತ ಮುಖ್ಯವಾದ ಕಾರ್ಯಕ್ರಮವನ್ನು ಕೈಗೊಂಡಿದೆ. ಸದರಿ ಕೆಲಸವನ್ನು ಇದುವರೆವಿಗೂ ಆಂದೋಲನದಂತೆ ಅರ್ಜಿ ಪ್ರಕರಣಗಳ ಆಧಾರದ ಮೇಲೆ ಮಾಡಲಾಗುತ್ತಿದ್ದು, ರಾಜ್ಯ ಮಟ್ಟದಲ್ಲಿ ವ್ಯವಸ್ಥಿತವಾಗಿ ಯೋಜನೆಯಿಂದ ಕ್ರಮಬದ್ಧವಾದ ವಿಧಾನದಲ್ಲಿ ಪೂರ್ಣವಾಗಿ ಜಾರಿಯಾಗಿರುವುದಿಲ್ಲ. ಇಂದಿನ ದಿನಗಳಲ್ಲಿ ಭೂಮಿಯ ಮೌಲ್ಯವು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಬಹಳ ವರ್ಷಗಳ ಹಿಂದೆಯೇ ಸಮಾಜದ ಹಿಂದುಳಿದ ವರ್ಗದ ಜನರಿಗೆ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಹೆಚ್ಚಿನ ಪ್ರಕರಣಗಳನ್ನು ಇನ್ನೂ ಪೋಡಿ ಸಕ್ರಮಗೊಳಿಸಿ ಹಕ್ಕು ದಾಖಲೆಗಳನ್ನು ಅಂತಿಮಗೊಳಿಸಿಲ್ಲವಾದ ಕಾರಣ ಈ ಯೋಜನೆಯ ಅಗತ್ಯತೆ ಹೆಚ್ಚಿದ್ದು, ತಕ್ಷಣ ಜಾರಿಗೊಳಿಸಬೇಕಿದೆ.

ಸರ್ಕಾರದ ನಿರ್ದೇಶನದ ಮೇರೆಗೆ ಈ ಮಹತ್ತರವಾದ ಕಾರ್ಯವನ್ನು ಇಲಾಖೆಯು ವಿಶೇಷ ಆಂದೋಲನ ರೂಪದಲ್ಲಿ ಪ್ರಾರಂಭಿಸಿದ್ದು ಇದರಲ್ಲಿ ಇಲಾಖಾ ಭೂಮಾಪಕರೊಂದಿಗೆ ಅಗತ್ಯವಿರುವ ಸಂದರ್ಭದಲ್ಲಿ ಪರವಾನಗಿ ಭೂಮಾಪಕರ ಸೇವೆಯನ್ನು ಬಳಸಲಾಗುತ್ತಿದೆ. ಸದರಿ ಕಾರ್ಯಕ್ರಮವನ್ನು ಯೋಜನಾ ರೀತಿಯಲ್ಲಿ ಅನುಷ್ಠಾನಗೊಳಿಸದಿದ್ದಲ್ಲಿ ನಿಗದಿತ ಸಮಯದಲ್ಲಿ ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲಾಗುವುದಿಲ್ಲ. ರಾಜ್ಯದಲ್ಲಿ 3,500 ಪರವಾನಗಿ ಭೂಮಾಪಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಸೇವೆಯನ್ನು ಉಪಯೋಗಿಸಿಕೊಂಡಲ್ಲಿ ಸೇವೆಗೆ ಅನುಗುಣವಾಗಿ ಸೂಕ್ತ ಸಂಭಾವನೆಯನ್ನು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳು ಮತ್ತು ಪರವಾನಗಿ ಭೂಮಾಪಕರ ಪ್ರತಿನಿಧಿಗಳೊಂದಿಗೆ ವಿವರವಾಗಿ ಚರ್ಚಿಸಿದ ನಂತರ ಪರವಾನಗಿ ಭೂಮಾಪಕರು ನಿರ್ವಹಿಸುವ ಕೆಲಸಗಳಿಗೆ ಈ ಕೆಳಗಿನ ಸಂಭಾವನೆಯನ್ನು (ಸೇವಾ ಶುಲ್ಕ) ನಿಗದಿಪಡಿಸಲಾಗಿದೆ.

ಪರವಾನಗಿ ಭೂಮಾಪಕರು ಇಲಾಖಾ ಭೂಮಾಪಕರಿಗೆ ಸರ್ಕಾರಿ ಜಮೀನಿನ ಗಡಿಯನ್ನು ನಿಗದಿಪಡಿಸುವ ಕೆಲಸದಲ್ಲಿ ಸಹಕರಿಸಬೇಕು. ಈ ಕೆಲಸವನ್ನು ನಿರ್ವಹಿಸುವಾಗ ಪ್ರಾರಂಭದಲ್ಲಿ ಸರ್ಕಾರಿ ಜಮೀನಿಗೆ ಹೊಂದಿಕೊಂಡಂತಹ ಅಕ್ಕಪಕ್ಕದ ಸರ್ವೆ ನಂಬರುಗಳ ಗಡಿಯನ್ನೂ ನಿಗದಿಪಡಿಸಿಕೊಳ್ಳಬೇಕು. ಈ ಕೆಲಸದಲ್ಲಿ 8 ಸರ್ವೆ ನಂಬರುಗಳ ಅಥವಾ 8 ಹಿಸ್ಸಾ ನಂಬರುಗಳ ಗಡಿ ನಿಗದಿಪಡಿಸುವಿಕೆಯು ಒಂದು ದಿನದ ಕೆಲಸಕ್ಕೆ ಸಮವಾಗಿರುತ್ತದೆ. ಈ ರೀತಿಯಲ್ಲಿ ಪರವಾನಗಿ ಭೂಮಾಪಕರು ಅಳತೆ ಮಾಡಿ 8 ಸರ್ವೆ ನಂಬರುಗಳ ಅಥವಾ 8 ಹಿಸ್ಸಾ ನಂಬರುಗಳ ಅಥವಾ ಸರ್ವೆ ನಂಬರ್ ಮತ್ತು ಹಿಸ್ಸಾ ನಂಬರುಗಳು ಸೇರಿ ಒಟ್ಟು 8 ನಂಬರುಗಳ ಗಡಿ ನಿಗದಿಪಡಿಸಿದರೆ ಅವರಿಗೆ 500/- ರೂ.ಗಳನ್ನು [illegible]

(ಅನುಪಾತಕ್ಕನುಗುಣವಾಗಿ) ಹಣವನ್ನು ನೀಡಲಾಗುವುದು. ಪರವಾನಗಿ ಭೂಮಾಪಕರು ನಿರ್ವಹಿಸುವ ಹೆಚ್ಚುವರಿ ಬ್ಲಾಕುಗಳ (8ಕ್ಕಿಂತ ಹೆಚ್ಚು ಬ್ಲಾಕ್‌ಗಳಿದ್ದಲ್ಲಿ) ಕೆಲಸಕ್ಕಾಗಿ ಹೆಚ್ಚುವರಿ ಬ್ಲಾಕ್ ಒಂದಕ್ಕೆ ರೂ.25/- ರಂತೆ ನೀಡಲಾಗುವುದು.

ಉದಾ:- ಸರ್ಕಾರಿ ಜಮೀನುಗಳ ಸರ್ವೆ ನಂಬರಿನ ಗಡಿ ನಿಗದಿಪಡಿಸುವಾಗ ಸದರಿ ನಂಬರಿಗೆ ಹೊಂದಿಕೊಂಡಂತಹ ಸರ್ವೆ ನಂಬರುಗಳ ಗಡಿಗಳನ್ನು ಸಹ ನಿಗದಿಪಡಿಸಿಕೊಳ್ಳುವುದು. ಈ ಕೆಲಸವನ್ನು ನಿರ್ವಹಿಸುವಾಗ 8 ಸರ್ವೆ ನಂಬರ್ ಗಳ ಗಡಿಗಳು (ಹಿಸ್ಸಾಗಳಿಲ್ಲದಿದ್ದಲ್ಲಿ) ಅಥವಾ ಹಿಸ್ಸಾಗಳಿದ್ದಲ್ಲಿ 4 ಹಿಸ್ಸಾ ನಂಬರ್‌ಗಳನ್ನೊಳಗೊಂಡಂತೆ ಮತ್ತು 4 ಸರ್ವೆ ನಂಬರುಗಳ ಗಡಿಗಳನ್ನು ಒಗ್ಗೂಡಿಸಿ 8 ನಂಬರುಗಳೆಂದು ಪರಿಗಣಿಸಿ ರೂ.300/- ಗಳಿಗೆ ಅರ್ಹರೆಂದು ಪರಿಗಣಿಸಬಹುದಾಗಿರುತ್ತದೆ. ಅಂದರೆ 8 ಸರ್ವೆ ನಂಬರುಗಳು, 8 ಹಿಸ್ಸಾ ಸರ್ವೆ ನಂಬರುಗಳು ಅಥವಾ ಹಿಸ್ಸಾ ಮತ್ತು ಸರ್ವೆ ನಂಬರುಗಳೆರಡನ್ನೂ ಸೇರಿಸಿ ಒಟ್ಟು 8 ನಂಬರುಗಳೆಂದು ಪರಿಗಣಿಸಬೇಕಾಗಿರುತ್ತದೆ. ಈ ಚಟುವಟಿಕೆಯು ಕ್ಷೇತ್ರ ಕೆಲಸಕ್ಕೆ ಮಾತ್ರ ಅನ್ವಯವಾಗುತ್ತಿದ್ದು ಮತ್ತು ಯಾವುದೇ ದಾಖಲೆ ತಯಾರಿಸುವಂತಿಲ್ಲ.

2. ಮಂಜೂರಿದಾರರ ಅನುಭವದಂತೆ ಸರ್ಕಾರಿ ಜಮೀನಿನ ಅಳತೆ ಕೆಲಸ ನಿರ್ವಹಿಸುವಾಗಲೂ ಪರವಾನಗಿ ಭೂಮಾಪಕರ ಸೇವೆಯನ್ನು ಉಪಯೋಗಿಸಿಕೊಳ್ಳಬಹುದು. ಪರವಾನಗಿ ಭೂಮಾಪಕರು 8 ಬ್ಲಾಕುಗಳನ್ನು ಅಳತೆ ಮಾಡಿ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಅಂದರೆ ಎಲ್.ಆರ್. ಟಿಪ್ಪಣಿ, ಎಲ್.ಆರ್.ಪಕ್ಕಾ, ಮತ್ತು ಪ್ರತಿಗಳನ್ನು ತಯಾರಿಸಿದಲ್ಲಿ ಸದರಿ ಕೆಲಸವನ್ನು ಒಂದು ದಿನದ ಕೆಲಸಕ್ಕೆ ಸಮಾನವೆಂದು ಪರವಾನಗಿ ಭೂಮಾಪಕರಿಗೆ ರೂ.300/- ಗಳನ್ನು ನೀಡಬಹುದಾಗಿದೆ. ಅಥವಾ ಕೆಲಸದ ಪ್ರಮಾಣಕ್ಕನುಗುಣವಾಗಿ ಹಣವನ್ನು ನೀಡಬಹುದಾಗಿದೆ.

ಉದಾ:- ಮಂಜೂರಿ ಪ್ರಕರಣಗಳಲ್ಲಿ, ದಾಖಲೆಗಳು, ಅನುಭವ, ವಿಸ್ತೀರ್ಣ ಎಲ್ಲಾ ಸರಿಯಿದ್ದು ಯಾವುದೇ ವಿವಾದಗಳಿಲ್ಲದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ 8 ಬ್ಲಾಕುಗಳಿಗೂ ಅವಶ್ಯವಾದ ದಾಖಲೆಗಳಾದ ಎಲ್.ಆರ್. ಟಿಪ್ಪಣಿ, ಎಲ್.ಆರ್.ಪಕ್ಕಾ ಮತ್ತು ಪ್ರತಿಗಳನ್ನು ತಯಾರಿಸಬೇಕಿರುತ್ತದೆ. ಮಂಜೂರಿದಾರರಿಗೆ ನ್ಯೂನತೆಗಳಿರುವ ಪ್ರಕರಣಗಳಲ್ಲಿ ಅಂದರೆ ಅನುಭವದ ವಿಸ್ತೀರ್ಣ, ಮಂಜೂರಿ ವಿಸ್ತೀರ್ಣಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದಲ್ಲಿ; ಅದೇ ಸರ್ವೆ ನಂಬರಿನಲ್ಲಿಯೇ ಸ್ಥಳ ಬದಲಾವಣೆಯಾಗಿದ್ದಲ್ಲಿ; ಮಂಜೂರಿದಾರರು ಸ್ವಾಧೀನದಲ್ಲಿದ್ದು ಕೆಲವು ದಾಖಲೆಗಳನ್ನು ಹೊಂದಿದ್ದು, ತಾಲ್ಲೂಕು ಕಛೇರಿಯಲ್ಲಿ ಮಂಜೂರಿ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಟಿಪ್ಪಣಿ, ಪಕ್ಕಾ ಮತ್ತು ಪ್ರತಿಗಳನ್ನು ತಯಾರಿಸುವ ಅಗತ್ಯವಿರುವುದಿಲ್ಲ. ಆದರೆ 10 ಬ್ಲಾಕುಗಳಿಗೆ ಸ್ಕೇಲ್‌ಗನುಗುಣವಾದ ನಕ್ಷೆಗಳನ್ನು ತಯಾರಿಸಬೇಕಿರುತ್ತದೆ. ಅಂದರೆ ಎಲ್ಲಾ ಸರಿಯಿರುವ 8 ಬ್ಲಾಕುಗಳಿಗೆ ಟಿಪ್ಪಣಿ ಮತ್ತು ಪಕ್ಕಾ ತಯಾರಿಸುವುದು ಅಥವಾ 10 ಬ್ಲಾಕುಗಳಿಗೆ ಸ್ಕೇಲ್‌ಗನುಗುಣವಾದ ನಕ್ಷೆ ತಯಾರಿಸುವುದು ಅಥವಾ ಈ ಎರಡೂ ರೀತಿಯ ಪ್ರಕರಣಗಳನ್ನೊಳಗೊಂಡಂತೆ ಪರಿಗಣಿಸಿ ಹಣ ಸಂದಾಯ ಮಾಡಬಹುದಾಗಿರುತ್ತವೆ. ಅಂದರೆ ಎಲ್ಲಾ ಸರಿಯಾಗಿರುವ 3 ಪ್ರಕರಣಗಳ ಹಾಗೂ ಕನಿಷ್ಟ ನಿಗದಿತ ಪ್ರಮಾಣದ ನಕ್ಷೆ ತಯಾರಿಸಿದ 6 ಪ್ರಕರಣಗಳನ್ನು ತಯಾರಿಸಿದ್ದಲ್ಲಿ 300/- ರೂ.ಗಳಿಗೆ ಅರ್ಹರೆಂದು ಪರಿಗಣಿಸಬಹುದಾಗಿದೆ ಅಥವಾ ನಿರ್ವಹಿಸಿದ ಕೆಲಸದ ಅನುಪಾತಕ್ಕನುಗುಣವಾಗಿ ಹಣವನ್ನು ಸಂದಾಯ ಮಾಡಬಹುದಾಗಿದೆ.

3. ಫಾರಂ ನಂ.50/53 ರ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಮತ್ತು ಸರ್ಕಾರ ನೀಡಿರುವ ಗುತ್ತಿಗೆಯ ಪ್ರಕರಣಗಳಲ್ಲಿ ಪರವಾನಗಿ ಭೂಮಾಪಕರು 10 ಬ್ಲಾಕುಗಳನ್ನು ಅಳತೆ ಮಾಡಿ ಸ್ಕೇಲ್‌ಗನುಗುಣವಾದ ನಕ್ಷೆಗಳನ್ನು ಮಾತ್ರ ತಯಾರಿಸಬೇಕು ಮತ್ತು ಟಿಪ್ಪಣಿ, ಪಕ್ಕಾ, ಅಥವಾ ಆಕಾರಬಂದು ತಯಾರಿಸುವಂತಿಲ್ಲ. ಸದರಿ ಕೆಲಸವನ್ನು ಒಂದು ದಿನದ ಕೆಲಸಕ್ಕೆ ಸಮಾನವೆಂದು ಪರಿಗಣಿಸಿ 300/- ರೂ.ಗಳನ್ನು ಸಂದಾಯ ಮಾಡಬಹುದು. ಪ್ರತಿ ದಿನವೂ

...ಹೆಚ್ಚುವರಿ ಬ್ಲಾಕುಗಳಿಗೆ (10 ಬ್ಲಾಕುಗಳಿಗಿಂತ ಹೆಚ್ಚಾಗಿ ನಿರ್ವಹಿಸಿದ ಬ್ಲಾಕುಗಳಿಗೆ) ಬ್ಲಾಕ್ ಒಂದಕ್ಕೆ 20/- ರೂ.ಗಳಂತೆ ಸಂದಾಯ ಮಾಡಬಹುದಾಗಿದೆ.

...:- ಫಾರಂ ನಂ.50/53 ರ ಅರ್ಜಿದಾರರು ಮತ್ತು ಸರ್ಕಾರ ನೀಡಿರುವ ಗುತ್ತಿಗೆ ಪ್ರದೇಶಕ್ಕೆ ಸ್ಕೇಲಿಗನುಗುಣವಾದ ನಕ್ಷೆ ತಯಾರಿಸಿದರೆ ಸಾಕಾಗುತ್ತದೆ. ಇಂತಹ 10 ಪ್ರಕರಣಗಳನ್ನು ನಿರ್ವಹಿಸಿದಲ್ಲಿ ರೂ.300/- ಕ್ಕೆ ಅರ್ಹರಾಗುತ್ತಾರೆ. ...ದು ವೇಳೆ ಇಂತಹ 8 ಬ್ಲಾಕುಗಳು ಮತ್ತು ಇದರೊಂದಿಗೆ 2 ಮಂಜೂರಿ ಪ್ರಕರಣಗಳನ್ನು ನಿರ್ವಹಿಸಿದಲ್ಲಿ ಅವರು ...300/- ಕ್ಕೆ ಅರ್ಹರಿರುತ್ತಾರೆ. ಅಥವಾ ನಿರ್ವಹಿಸುವ ಕೆಲಸದ ಪ್ರಮಾಣಕ್ಕನುಗುಣವಾಗಿ ಹಣ ಸಂದಾಯ ...ಬಹುದಾಗಿದೆ. ಮೇಲೆ ತಿಳಿಸಿದಂತಹ ಎರಡೂ ರೀತಿಯ ಪ್ರಕರಣಗಳ ಪ್ರಗತಿಯನ್ನು ಸಂಯೋಜಿಸಿ ಹಣವನ್ನು ...ಾಯ ಮಾಡಬಹುದಾಗಿದೆ.

4. ಕೆಲವು ಸಂದರ್ಭಗಳಲ್ಲಿ ಪರವಾನಗಿ ಭೂಮಾಪಕರು ಸರ್ಕಾರಿ ಜಮೀನುಗಳ ಅಳತೆ ಮಾಡುವಾಗ ಅವರು ಕಡಿಮೆ ...ಿಯ ಬ್ಲಾಕುಗಳನ್ನೊಳಗೊಂಡ ಹೆಚ್ಚಿನ ವಿಸ್ತೀರ್ಣದ ಪ್ರದೇಶಗಳನ್ನು ಅಳತೆ ಮಾಡಬೇಕಾಗುತ್ತದೆ. ಇಂತಹ ...ರ್ಭಗಳಲ್ಲಿ ಬ್ಲಾಕುಗಳಿಗನುಗುಣವಾಗಿ ...ವನ್ನು ನೀಡಿದಲ್ಲಿ ಅವರು ಹೆಚ್ಚಿನ ವಿಸ್ತೀರ್ಣವನ್ನು ಅಳತೆ ಮಾಡಿದ್ದರೂ ಸಹ ಕಡಿಮೆ ಹಣ ಪಡೆಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ 30 ಎಕರೆವರೆಗಿನ ವಿಸ್ತೀರ್ಣದ ಜಮೀನನ್ನು ಅಳತೆ ಮಾಡಿ ಒತ್ತುವರಿಯನ್ನು ಗುರ್ತಿಸುವ ಮತ್ತು ಅನುಭವದಂತೆ ಅಳತೆ ಮಾಡುವ ಕೆಲಸವನ್ನು ಒಂದು ದಿನದ ಕೆಲಸಕ್ಕೆ ಸಮಾನವೆಂದು ಪರಿಗಣಿಸಿ ರೂ.300/- ಗಳನ್ನು ನೀಡಬಹುದಾಗಿದೆ. ... ಎಕರೆಗಿಂತಲೂ ಹೆಚ್ಚಿನ ವಿಸ್ತೀರ್ಣವನ್ನು ಅಳತೆ ಮಾಡಿದಲ್ಲಿ, ಪ್ರತಿ ಹೆಚ್ಚುವರಿ ... ಎಕರೆಗೆ ರೂ.25/- ಗಳನ್ನು ...ಚ್ಚುವರಿ... ಸಂದಾಯ ಮಾಡಬಹುದಾಗಿದೆ.

...:- ಉತ್ತರ ಕರ್ನಾಟಕ ಭಾಗದ ಕೆಲವು ಜಿಲ್ಲೆಗಳಲ್ಲಿ ಪ್ರತಿಯೊಂದು ಬ್ಲಾಕುಗಳು ಹೆಚ್ಚಿನ ವಿಸ್ತೀರ್ಣವನ್ನು ...ಂದಿರಬಹುದು. ಪ್ರತಿಯೊಂದು ಬ್ಲಾಕ್ ಕೂಡ ಸರಾಸರಿಯಾಗಿ 8 ರಿಂದ 10 ಎಕರೆ ಇರುವ ಸಾಧ್ಯತೆ ಇರುತ್ತದೆ. ಇಂತಹ ಪ್ರಕರಣಗಳಲ್ಲಿ ಪರವಾನಗಿ ಭೂಮಾಪಕರು ಅಳತೆ ಕಾರ್ಯ ನಿರ್ವಹಿಸಿದಾಗ ಬ್ಲಾಕುಗಳನ್ನು ಪರಿಗಣಿಸದೆ ...ಅಳತೆ ಕೆಲಸಕ್ಕೆ ಸಮಾಂತರಗೊಳಿಸುವುದು. ಇದರಲ್ಲಿ ಬೆಟ್ಟ / ಗುಡ್ಡಗಳನ್ನೊಳಗೊಂಡ 4 ರಿಂದ 6 ಬ್ಲಾಕುಗಳು ಕೂಡ ಇರಬಹುದಾಗಿದೆ.

5. ಪರವಾನಗಿ ಭೂಮಾಪಕರು ಕಛೇರಿಯಲ್ಲಿ ನಿರ್ವಹಿಸಬಹುದಾದ ಕೆಲಸಗಳು:-

- ಪಕ್ಕಾಬುಕ್ಕಿನ ಆಧಾರದ ಮೇಲೆ ಟಿಪ್ಪಣಿಗಳ ಪುನರ್ ನಿರ್ಮಾಣ ಮಾಡುವುದು.
- ಸ್ಕೇಲ್ ನಂಬರುಗಳನ್ನು ಅಳತೆ ಮಾಡುವ ಸಲುವಾಗಿ ಲಾಗು ಸರ್ವೆ ನಂಬರುಗಳ ಜಂಟಿ ನಕ್ಷೆ ತಯಾರಿಸುವುದು.
- ಗೋಮಾಳ ಜಮೀನಿನಲ್ಲಿ ಹೊಸದಾಗಿ ಅಳತೆ ಮಾಡಿದ ಎಲ್ಲಾ ಬ್ಲಾಕುಗಳ ಪೋಡಿ ನಕ್ಷೆ ಮತ್ತು ಪೋಡಿ ತಃಖ್ತೆಗಳನ್ನು ತಯಾರಿಸುವುದು.
- ಅಳತೆ ಕಾರ್ಯದ ಬಗ್ಗೆ ನಮೂನೆ 1 ರಿಂದ 4 ರಲ್ಲಿ ನಮೂದಾಗಿರುವ ಎಲ್ಲರಿಗೆ ತಿಳುವಳಿಕೆ ಪತ್ರಗಳನ್ನು ಬರೆಯುವುದು.
- ಆಕಾರಬಂದು ಬರೆಯುವುದು.

6. ಕಛೇರಿ ಕೆಲಸಕ್ಕೆ ಸಂಬಂಧಿಸಿದಂತೆ, ಒಬ್ಬ ಸಾಧಾರಣ ಭೂಮಾಪಕ ದಿನವೊಂದಕ್ಕೆ ಸರಾಸರಿ 10 ಟಿಪ್ಪಣಿಗಳನ್ನು ಬು... ಆಧಾರದ ಮೇಲೆ ಪುನರ್ ನಿರ್ಮಿಸಬಹುದು. ತಿಳುವಳಿಕೆ ಪತ್ರ ಬರೆಯುವುದಾದರೆ ದಿನ ಒಂದಕ್ಕೆ 400 ತಿಳುವಳಿಕೆ ಪತ್ರಗಳನ್ನು ಬರೆಯಬಹುದು. 8 ಸರ್ವೆ ನಂಬರುಗಳ ಜಂಟಿ ನಕ್ಷೆಗಳನ್ನು ತಯಾರಿಸಬಹುದು. ಸುಮಾರು 10 ಹರಿದುಹೋದ / ಶಿಥಿಲಗೊಂಡ ಟಿಪ್ಪಣಿಗಳ ಪುನರ್ ನಿರ್ಮಾಣ ಮಾಡಬಹುದು. 40 ಬ್ಲಾಕುಗಳಿಗೆ ಪೋಡಿ ನಕ್ಷೆ ಮತ್ತು ಪೋಡಿ ತಃಖ್ತೆಗಳನ್ನು ತಯಾರಿಸಬಹುದು. ದಿನ ಒಂದಕ್ಕೆ 100 ಸರ್ವೆ ನಂಬರುಗಳಿಗೆ

ಆಕಾರಬಂದುಗಳನ್ನು ಬರೆಯಬಹುದು. ಪೋಡಿ ಕೆಲಸಗಳ ಸರಾಸರಿ ಚಟುವಟಿಕೆಗಳಂತೆ ಕಛೇರಿಯಲ್ಲಿ ಕೆಲಸ ನಿರ್ವಹಿಸುವ ಪರವಾನಗಿ ಭೂಮಾಪಕರಿಗೆ ದಿನ ಒಂದಕ್ಕೆ ರೂ.300/- ಗಳನ್ನು ಸಂದಾಯ ಮಾಡಬಹುದಾಗಿದೆ.

ಪ್ರತಿ ಕಾರ್ಯಕ್ಕೂ ನಿಗದಿಪಡಿಸಿದ ದರ.

| | |
|---|---|
| ತಿಳುವಳಿಕೆ ಪತ್ರದ ಪ್ರತಿಯೊಂದು ಹೆಸರಿಗೆ | ರೂ.0.75 |
| ಸ್ಕೇಲ್ ನಂಬರುಗಳ ಪ್ರತಿ ಜಂಟಿ ನಕ್ಷೆಗೆ | ರೂ.37.50 |
| ಹರಿದುಹೋದ ಟಿಪ್ಪಣಿಗಳ ಪ್ರತಿ ಟಿಪ್ಪಣಿ ಪುನರ್ ನಿರ್ಮಾಣದ ಬಗ್ಗೆ | ರೂ.35.00 |
| ಪ್ರತಿಯೊಂದು ಬ್ಲಾಕ್‌ನ ಪೋಡಿ ನಕ್ಷೆ ಮತ್ತು ತಖ್ತೆ | ರೂ.7.50 |
| ಆಕಾರಬಂದು ಬರೆಯುವ ಪ್ರತಿ ಸಾಲಿಗೆ | ರೂ.3.00 |

ಪರವಾನಗಿ ಭೂಮಾಪಕರು ಕಛೇರಿಯಲ್ಲಿ ವಿವಿಧ ರೀತಿಯ ಚಟುವಟಿಕೆಗಳ ಕೆಲಸವನ್ನು ನಿರ್ವಹಿಸಬೇಕಾಗಿದ್ದು ಮಾಡಿರುವ ಕೆಲಸಗಳಿಗೆ ಅಥವಾ ಸಂಯೋಜಿತ ಪ್ರಮಾಣಕ್ಕನುಗುಣವಾಗಿ ಹಣ ಪಾವತಿಸಬಹುದಾಗಿದೆ. ಒಂದು ವೇಳೆ 60 ಹೆಸರುಗಳ ತಿಳುವಳಿಕೆ ಪತ್ರ, 2 ಜಂಟಿ ನಕ್ಷೆ, 2 ಹರಿದ ಟಿಪ್ಪಣಿಗಳ ಪುನರ್ ನಿರ್ಮಾಣ, 10 ಬ್ಲಾಕುಗಳ ಪೋಡಿ ಸ್ಕೆಚ್ ಮತ್ತು ಪೋಡಿ ತಖ್ತೆಗಳು, ಮತ್ತು 15 ಸಾಲುಗಳ ಆಕಾರಬಂದುಗಳನ್ನು ಬರೆದರೆ ಪ್ರಮಾಣಕ್ಕನುಗುಣವಾಗಿ ರೂ.300/- ಗಳಾಗುತ್ತವೆ. ಅಥವಾ 400 ಹೆಸರುಗಳ ತಿಳುವಳಿಕೆ ಪತ್ರ ಬರೆದರೆ ರೂ.300/- ಲಭಿಸುತ್ತವೆ. ಅಥವಾ ತಿಳುವಳಿಕೆ ಪತ್ರದಲ್ಲಿ 100 ಹೆಸರುಗಳು, 5 ಹರಿದ ಟಿಪ್ಪಣಿಗಳ ಪುನರ್ ನಿರ್ಮಾಣ ಮತ್ತು 10 ಬ್ಲಾಕುಗಳ ಪೋಡಿ ಸ್ಕೆಚ್ ಮತ್ತು ಪೋಡಿ ತಖ್ತೆಗಳನ್ನು ತಯಾರಿಸಿದರೆ ರೂ.300/- ಗಳನ್ನು ಪಡೆಯಬಹುದು.

ಈ ರೀತಿ ಪರವಾನಗಿ ಭೂಮಾಪಕರು ಮೇಲೆ ನಮೂದಿಸಿರುವ ಕಛೇರಿಯ ವಿವಿಧ ಕೆಲಸಗಳನ್ನು ನಿರ್ವಹಿಸಿದರೆ, ನಿರ್ವಹಿಸಿದ ಪ್ರತಿಯೊಂದು ಕೆಲಸದ ಪ್ರಮಾಣಕ್ಕನುಗುಣವಾಗಿ ಹಣ ಪಡೆಯಬಹುದಾಗಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು :-

(1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
(2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(3) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(4) ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(5) ಎಲ್ಲಾ ತಹಸೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(6) ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು / ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
(7) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(8) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(9) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(10) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿವಾಹಕ ಸಂಘ, ಬೆಂಗಳೂರು.
(11) ಅಧ್ಯಕ್ಷರು, ಕರ್ನಾಟಕ ರಾಜ್ಯ, ಪರವಾನಗಿ ಭೂಮಾಪಕರ ಸಂಘ, ಕೆ.ಜಿ. ರಸ್ತೆ, ಬೆಂಗಳೂರು.